**ಪಾಠ–9** **ಮೇ 21–27**

# ಮೋಸಗಾರ ಯಾಕೋಬ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ಆದಿಕಾಂಡ 25:21–34, ಆದಿಕಾಂಡ 28:10–22, 11:1–9, 29:1–30, 30:25–32.

**ಸ್ಮರಣವಾಕ್ಯ : "ಮತ್ತು ಏಸಾವನು ಅವನಿಗೆ, ಯಾಕೋಬನೆಂಬ ಹೆಸರು ಅವನಿಗೆ ಸರಿಯಾಗಿದೆ ಅಲ್ಲವೇ? ಈ ಎರಡು ಸಾರಿ ನನ್ನನ್ನು ವಂಚಿಸಿರುವನು. ನನ್ನ ಚೊಚ್ಚಲುತನದ ಹಕ್ಕನ್ನು ಅಪಹರಿಸಿದನು; ಈಗ, ಇಗೋ ನನ್ನ ಆಶೀರ್ವಾದವನ್ನೂ ತೆಗೆದುಕೊಂಡನು ಎಂದು ಹೇಳಿ ತನ್ನ ತಂದೆಗೆ– ನನಗೋಸ್ಕರ ನಿನ್ನಲ್ಲಿ ಒಂದು ಆಶೀರ್ವಾದವು ಇರುವುದಿಲ್ಲವೋ?" ಎಂದನು"** (ಆದಿಕಾಂಡ 27:36).

ವಾಗ್ದಾನದ ಸಂತತಿ (ಕ್ರಿಸ್ತನು)ಯ ಪೂರ್ವಜ ಹಾಗೂ ಅದ್ಭುತದ ಶಿಶುವಾಗಿ ಜನಿಸಿದ ಇಸಾಕನ ಮುಂದುವರಿದ ವಂಶಾವಳಿಯ ಚರಿತ್ರೆಯನ್ನು ನಾವು ಈಗ ನೋಡುವ. ಈ ಕಥೆಯ ಉತ್ತಮ ಬಗೆಯಲ್ಲಿ ಆರಂಭಗೊಳ್ಳದು. ತನ್ನ ಮಗ ಯಾಕೋಬನಲ್ಲಿದ್ದ ದೋಷದ ಸ್ವಭಾವವು ಚೊಚ್ಚಲುತನದ ಹಕ್ಕು ಮತ್ತು ತದನಂತರ ಇಸಾಕನಿಂದ ಹೊಂದಬೇಕಾದ ಆಶೀರ್ವಾದದ ಹಕ್ಕಿನ ವಿಷಯದಲ್ಲಿ ಈ ಇಬ್ಬರು ಸೋದರರ ನಡುವೆ ಬಂದ ಕಲಹದಲ್ಲಿ ತೋರಿಬರುತ್ತದೆ (ಆದಿ 25:27–34; ಆದಿ 27).

ಯಾಕೋಬನು ತನ್ನ ತಂದೆಗೆ ಮೋಸಮಾಡಿ, ತನ್ನ ಸಹೋದರನಿಂದ ಆಶೀರ್ವಾದವನ್ನು ಕದ್ದುಕೊಂಡದ್ದರಿಂದ, ಆತನು ತನ್ನ ಜೀವ ಉಳಿಸಿಕೊಳ್ಳುವುದಕ್ಕಾಗಿ

*** ಈ ವಾರದ ಪಾಠವನ್ನು ಮೇ 28ರ ಸಬ್ಬತ್ತಿಗೆ ಅಧ್ಯಯನ ಮಾಡಿರಿ ಮತ್ತು ಸಿದ್ಧಪಡಿಸಿಕೊಳ್ಳಿರಿ.**

ಓಡಿಹೋಗಬೇಕಾಯಿತು. ಆ ದೇಶಾಂತರದಲ್ಲಿ ದೇವರು ಆತನನ್ನು ಬೇತೇಲಿನಲ್ಲಿ ಎದುರುಗೊಳ್ಳುವನು (ಆದಿ 28:10–22). ಅಲ್ಲಿಂದಾಚೆ ಆ ಮೋಸಗಾರನಾದ ಯಾಕೋಬನು ತಾನೇ ಸ್ವಲ್ಪ ಮೋಸ ಅನುಭವಿಸುತ್ತಾನೆ. ತಾನು ಪ್ರೀತಿಸುವ ರಾಹೇಲಳ ಬದಲಾಗಿ (ಆದಿ 29), ಹಿರಿಯ ಸಹೋದರಿ ಲೇಯಳನ್ನು ಯಾಕೋಬನಿಗೆ ಕೊಡಲಾಗುತ್ತದೆ. ಮತ್ತು ಆತನು ತನ್ನ ಹೆಂಡತಿಯರನ್ನು ಪಡೆಯಲಿಕ್ಕೆ 14 ವರುಷಗಳು ದುಡಿಯಬೇಕಾಗುತ್ತದೆ.

ಆದಾಗ್ಯೂ, ಯಾಕೋಬನು ಸಹ ದೇವರ ಆಶೀರ್ವಾದವನ್ನು ಅನುಭವಿಸಿದನು. ಅದೇ ಸಂದೇಶದಲ್ಲಿ 11 ಮಕ್ಕಳನ್ನು ಪಡೆದನು ಮತ್ತು ದೇವರು ಆತನ ಆಸ್ತಿಯನ್ನು ವೃದ್ಧಿಮಾಡಿದನು.

ಹೀಗೆ, ಈಕಥೆಯಲ್ಲಿ ಏನೆಲ್ಲಾ ನಾವು ನೋಡಿದರೂ, ದೇವರು ಹೇಗೆ ತನ್ನ ಒಡಂಬಡಿಕೆಯ ವಾಗ್ದಾನವನ್ನು ಒಂದಲ್ಲ ಒಂದು ರೀತಿಯಲ್ಲಿ, ಜನರು ತಪ್ಪಿಸಿದಾಗ್ಯೂ, ನೆರವೇರಿಸುವುದನ್ನು ನೋಡುತ್ತೇವೆ.

**ಭಾನುವಾರ** **ಮೇ 22**

## ಯಾಕೋಬನು ಮತ್ತು ಏಸಾವನು

ಆದಿಕಾಂಡ 25:21–34ನ್ನು ಓದಿರಿ. ಏಸಾವ ಮತ್ತು ಯಾಕೋಬರ ವ್ಯಕ್ತಿತ್ವಗಳನ್ನು ಹೋಲಿಸಿರಿ. ಯಾಕೋಬನ ಯಾವ ಸ್ವಭಾವಗಳು ಆತನು ಇಸಾಕನ ಆಶೀರ್ವಾದವನ್ನು ಪಡೆಯಲು ಯೋಗ್ಯನಾಗಿದ್ದನು?

ಈಗಾಗಲೇ, ತಮ್ಮ ತಾಯಿಯ ಗರ್ಭದಿಂದಲೇ ಯಾಕೋಬ ಮತ್ತು ಏಸಾವರು ವಿಭಿನ್ನರು ಮತ್ತು ಪರಸ್ಪರ ಹೋರಾಟ ಮಾಡುವರು ಎಂದು ನಾವು ತಿಳಿಯುತ್ತೇವೆ. ಏಸಾವನು ಅರಣ್ಯದಲ್ಲಿ ಸಂಚರಿಸುವವನಾಗಿ ಬಹಳ ನಿಪುಣ ಬೇಟೆಗಾರನು, ಆದರೆ ಯಾಕೋಬನು ಮನೆಯಲ್ಲಿದ್ದು ಮೃದು ವ್ಯಕ್ತಿಯಾಗಿದ್ದನು. ಆದಿಕಾಂಡ 25:27ರಲ್ಲಿ ಈ ಸ್ವಭಾವವನ್ನು ತಿಳಿಸಲು ಬಳಸಲಾದ ಇಬ್ರಿಯ ಪದ ಟಾಮ್ ಎಂಬ ಪದವು ಯೋಬನ ಕುರಿತು "ದೋಷವಿಲ್ಲದವನು" (ಯೋಬ 1:8) ಎಂದು ಮತ್ತು ನೋಹನು "ಪರಿಪೂರ್ಣ"ನಾಗಿದ್ದನು (ಆದಿ 6:9) ಎಂಬುದನ್ನು ವಿವರಿಸಲು ಬಳಸಲಾಗಿದೆ.

ಈ ಸ್ವಭಾವದಲ್ಲಿನ ವ್ಯತ್ಯಾಸಗಳು ತಮ್ಮ ನಂತರದ ವರುಷಗಳಲ್ಲಿ ಹೆಚ್ಚು ವ್ಯಕ್ತವಾಗುತ್ತದೆ (ಆದಿ 27:1–28:5). ಏಸಾವನು ದಣಿದು ಹಸಿದವನಾಗಿ ಮನೆಗೆ ಹಿಂದಿರುಗಿದಾಗ ಯಾಕೋಬನು ಅಲಸಂದಿ ಗುಗ್ಗರಿಯನ್ನು ಬೇಯಿಸುತ್ತಿರುವುದನ್ನು ನೋಡುತ್ತಾನೆ. ಏಸಾವನಿಗೆ "ಈ ದಿನದ" (ಆದಿ 25:31) ಆಹಾರವನ್ನು ನೋಡುವುದರಲ್ಲಿ ಮತ್ತು ಅದನ್ನು ದೈಹಿಕವಾಗಿ ಅನುಭವಿಸುವುದರಲ್ಲಿ ಇರುವ ಸುಖವು ತನ್ನ ಚೊಚ್ಚಲುತನದ ಜೊತೆಗೆ ಹೊಂದಿಕೊಂಡ ಆಶೀರ್ವಾದವನ್ನು ಮುಂದೆ ಹೊಂದುವುದಕ್ಕಿಂತ ಬಹಳ ಮಹತ್ವದ್ದಾಗಿತ್ತು (ಇಬ್ರಿಯ 12:16,17 ದೊಂದಿಗೆ ಹೋಲಿಸಿ).

"ಅಬ್ರಹಾಮನಿಗೆ ಮಾಡಲಾದ ವಾಗ್ದಾನಗಳು ಮತ್ತು ಅದನ್ನು ಆತನ ಮಗನಿಗೆ ದೃಢಪಡಿಸಿದ್ದನ್ನು ಇಸಾಕ ಮತ್ತು ರೆಬೆಕ್ಕಳು ತಮ್ಮ ಎಲ್ಲಾ ಭರವಸೆ ಮತ್ತು ನಿರೀಕ್ಷೆಗಳ ಮಹಾಉದ್ದೇಶವೆಂದು ಭದ್ರವಾಗಿ ಆಧಾರ ಮಾಡಿಕೊಂಡಿದ್ದರು. ಈ ವಾಗ್ದಾನಗಳ ಬಗ್ಗೆ ಏಸಾವ ಮತ್ತು ಯಾಕೋಬರು ಚೆನ್ನಗಿ ತಿಳಿದಿದ್ದರು. ಚೊಚ್ಚಲುತನವನ್ನು ಶ್ರೇಷ್ಠ ಮಹತ್ವದ್ದಾಗಿ ಪರಿಗಣಿಸಬೇಕೆಂದು ಅವರು ಉಪದೇಶಿಸಲ್ಪಟ್ಟಿದ್ದರು. ಯಾಕೆಂದರೆ ಅದರಲ್ಲಿ ಕೇವಲ ಲೌಕಿಕ ಸಂಪತ್ತು ಮಾತ್ರವಲ್ಲದೆ ಆಧ್ಯಾತ್ಮಿಕ ಸರ್ವಶ್ರೇಷ್ಠತೆಯನ್ನು ಬಾಧ್ಯತೆಯಾಗಿ ಹೊಂದುವುದು ಒಳಪಟ್ಟಿತ್ತು. ಯಾರು ಅದನ್ನು ಹೊಂದುವರೋ ಅವರು ತನ್ನ ಮನೆಯ ಯಾಜಕನಾಗುತ್ತಿದ್ದನು, ಮತ್ತು ಆತನ ವಂಶಾವಳಿಯಲ್ಲಿ ಈ ಲೋಕದ ವಿಮೋಚಕನು ಹುಟ್ಟಿಬರುವದಾಗಿತ್ತು– ಎಲೆನ್ ಜಿ ವೈಟ್, ಪ್ಯಾಟ್ರಿಯಾರ್ಕ್ಸ್ ಮತ್ತು ಪ್ರಾಫೆಟ್ಸ್, ಪುಟ 177.

ತನ್ನ ಸಹೋದರನಿಗೆ ತದ್ವಿರುದ್ಧವಾಗಿ, ಯಾಕೋಬನಿಗೆ ಮುಂದಿನ ಆಧ್ಯಾತ್ಮಿಕ ಆಶೀರ್ವಾದದ ಮಹತ್ವವೇ ಹೆಚ್ಚು ಗಣ್ಯವಾಗಿತ್ತು. ಆದಾಗ್ಯೂ ನಂತರದಲ್ಲಿ, ತನ್ನ ತಾಯಿಯ ಪ್ರಚೋದನೆಯಿಂದ (ಆದಿಕಾಂಡ 27ನ್ನು ನೋಡಿರಿ). ಯಾಕೋಬನು ಬಹಿರಂಗವಾಗಿ ಮತ್ತು ಉದ್ದೇಶಪೂರ್ವಕವಾಗಿ, ತನ್ನ ತಂದೆಯನ್ನು ಮೋಸಗೊಳಿಸಿದನು, ಮತ್ತು ತನ್ನ ಮೋಸವನ್ನು ಮುಂದುವರೆಸಲು, 'ಕರ್ತನಾದ ದೇವರ' (ಆದಿ 27:20) ಹೆಸರನ್ನೇ ಬಳಸುತ್ತಾನೆ. ಇಂಥಾ ಮಹಾಭಯಾನಕ ಮೋಸವನ್ನು ಒಳ್ಳೆಯದೆಂದು ತಾನು ತಿಳಿದಿದ್ದನ್ನು ಪಡೆಯುವುದಕ್ಕಾಗಿ ಮಾಡಿಬಿಟ್ಟನು.

ಅದರ ಫಲಶ್ರುತಿಗಳು ದುರಂತವಾಗಿತ್ತು, ಈಗಾಗಲೇ ಅಪಶ್ರುತಿಯಲ್ಲಿದ್ದ ಕುಟುಂಬದಲ್ಲಿ ಇನ್ನಷ್ಟು ಅಪಶ್ರುತಿಯ ಮಜಲುಗಳು ಸೇರಿಕೊಂಡವು.

ಯಾಕೋಬನಿಗೆ ಒಳ್ಳೆಯದೊಂದು ಬೇಕಿತ್ತು. ಏನೇ ಅಮೂಲ್ಯದ್ದು (ತನ್ನ ಸಹೋದರನಿಗೆ ಹೋಲಿಸಿಕೊಂಡರೆ) ಆ ಗುಣ ಮೆಚ್ಚಬಹುದಾಗಿತ್ತು. ಆದರೂ ಅದನ್ನು ಪಡೆಯಲು ಮೋಸ ಹಾಗೂ ಸುಳ್ಳನ್ನು ಬಳಸುತ್ತಾನೆ. "ಒಳ್ಳೆಯದು" ಸಿಗುವುದಕ್ಕಾಗಿ ಕೆಟ್ಟದ್ದನ್ನು ಮಾಡುವ ಇದೇ ಮೋಸ ಬಲೆಯಲ್ಲಿ ಬೀಳದಂತೆ ನಾವು ಹೇಗೆ ತಪ್ಪಿಸಿಕೊಳ್ಳಬಹುದು?

**ಸೋಮವಾರ** **ಮೇ 23**

## ಯಾಕೋಬನ ನಿಚ್ಚಣಿಗೆ

ತನ್ನ ತಂದೆಯ ಆಶೀರ್ವಾದವನ್ನು ಯಾಕೋಬನು ಪಡಕೊಂಡನೆಂದು ಏಸಾವನಿಗೆ ತಿಳಿದ ಕೂಡಲೇ, ತಾನು ತನ್ನ ತಮ್ಮನಿಂದ ಮೋಸಹೋಗಿ ಅತಿಕ್ರಮಿಸಲ್ಪಟ್ಟಿದ್ದೇನೆಂದು ಅರಿತನು (ಆದಿ 27:36), ಮತ್ತು ಆತನನ್ನು ಕೊಲ್ಲಬೇಕೆಂದಿದ್ದನು (ಆದಿ 27:42). ರೆಬೆಕ್ಕಳು ಗಾಬರಿಗೊಂಡು, ಈ ಕೊಲೆಯನ್ನು ತಡೆಗಟ್ಟಬಯಸಿದಳು– ಏಕೆಂದರೆ ಅದು ಇಬ್ಬರು ಮಕ್ಕಳಿಗೂ ಮಾರಣಾಂತಿಕವಾಗಿತ್ತು (ಆದಿ 27:45). ಆಕಾರಣ, ಇಸಾಕನ ಸಹಾಯದಿಂದ (ಆದಿ 28:5), ಆಕೆಯು ತನ್ನ ಅಣ್ಣನ ಮನೆಗೆ (ಆದಿ 27:43) ಯಾಕೋಬನು ಓಡಿಹೋಗಬೇಕೆಂದು ಒತ್ತಾಯ ಮಾಡಿದಳು. ದೇಶಾಂತರದ ದಾರಿಯಲ್ಲಿ, ಯಾಕೋಬನು ಕನಸಿನಲ್ಲಿ ದೇವರನ್ನು ಸಂಧಿಸಿದನು; ಮತ್ತು ಆ ಸ್ಥಳಕ್ಕೆ "ದೇವರ ಮನೆ" ಎಂಬುದಾಗಿ "ಬೇತೇಲ್" ಎಂದು ಹೆಸರಿಟ್ಟು ದೇವರಿಗೆ ಪ್ರತಿಜ್ಞೆ ಮಾಡಿದನು.

ಆದಿಕಾಂಡ 28:10–22ನ್ನು ಆದಿಕಾಂಡ 11:1–9ನ್ನು ಹೋಲಿಸಿರಿ. ಹೇಗೆ ಬೇತೇಲು ಬಾಬೇಲಿಗಿಂತ ವಿಭಿನ್ನವಾಗಿದೆ? ಯಾಕೋಬನಿಗೆ ಬೇತೇಲಿನಲ್ಲಿ ಆದ ಅನುಭವ ಮತ್ತು ಬಾಬೇಲಿನಲ್ಲಿ ಆದ ವಿಷಯಗಳಿಂದ ನಾವು ದೇವರೊಂದಿಗೆ ಹೊಂದಿರುವ ಸಂಬಂಧದ ಬಗ್ಗೆ ನಾವೇನು ಕಲಿತುಕೊಳ್ಳೋಣ?

ಈ ಕನಸಿನಲ್ಲಿ ಯಾಕೋಬನು ಒಂದು ಅಸಮಾನ್ಯವಾದ ನಿಚ್ಚಳಿಗೆ ದೇವರೊಂದಿಗೆ ಸೇರಿಕೊಂಡಿದ್ದನ್ನು ನೋಡಿದನು. "ನಟ್ಸವ್" ಎಂದ ಅದೇ ಇಬ್ರಿಯ ಪದವನ್ನೇ

"ಏರ್ಪಟ್ಟಿದ್ದ" ನಿಚ್ಚಳಿಗೆ (ಆದಿ 28:12)ಯನ್ನು ಮತ್ತು "ನಿಂತುಕೊಂಡಿದ್ದ" ಕರ್ತನನ್ನು ಸೂಚಿಸುವುದಕ್ಕೆ ಬಳಸಲಾಗಿದೆ. ಇದು ಆ ನಿಚ್ಚಣಿಗೆ ಮತ್ತು ಕರ್ತನು ಒಂದೇ ಎಂಬಂತೆ ತೋರಬರುತ್ತದೆ.

ಆಕಾಶವನ್ನು ಮುಟ್ಟುವುದಕ್ಕೆ ಬಾಬೇಲಿನಲ್ಲಿ ಪಟ್ಟ ಪ್ರಯತ್ನಕ್ಕೆ ಈ ನಿಚ್ಚಣಿಗೆಯನ್ನು ತಾಳೆ ಮಾಡಬಹುದು. ಬಾಬೇಲಿನ ಗೋಪುರದ ಹಾಗೆಯೇ ಆ ನಿಚ್ಚಣಿಗೆಯು "ಪರಲೋಕದ ಬಾಗಿಲನ್ನು" ಮುಟ್ಟಬೇಕಿತ್ತು. ಆದರೆ ಬಾಬೇಲಿನ ಗೋಪುರವು ದೇವರನ್ನು ನಿಚ್ಚಣಿಗೆಯು ತೋರಿಸುವುದೇನೆಂದರೆ, ದೇವರನ್ನು ಮುಟ್ಟಲು ಮನುಷ್ಯನ ಶ್ರಮಸಾಮರ್ಥ್ಯಗಳಿಂದ ಸಾಧ್ಯವಿಲ್ಲ. ಆದರೆ ದೇವರನ್ನು ನಾವು ಕಂಡುಕೊಳ್ಳಲು ದೇವರೇ ನಮ್ಮ ಬಳಿಗೆ ಬರಬೇಕಾಗಿರುವುದು.

ಯಾಕೋಬನು ತನ್ನ ತಲೆಗೆ ದಿಂಬಾಗಿ ಬಳಸಿದ ಆ "ಬಂಡೆಯು" ಬೆತ್–ಏತ್ ಅಂದರೆ "ದೇವರ ಮನೆ" ಎಂಬುದಕ್ಕೆ ಸಂಕೇತವಾಗಿದೆ (ಆದಿ 28:17 ಮತ್ತು 28:22ನ್ನು ಹೋಲಿಸಿ). ಇದು ದೇವಾಲಯ, ದೇವ ದರ್ಶನಾಲಯ– ಮಾನವನ ರಕ್ಷಣೆಗೆ ದೇವರ ಕಾರ್ಯದ ಕೇಂದ್ರಸ್ಥಾನಕ್ಕೆ ಸೂಚಿತವಾಗಿದೆ.

ಆದರೂ, ಯಾಕೋಬನು ತನಗಾದ ಅನುಭವವನ್ನು ಕೇವಲ ಒಂದು ಆತ್ಮೀಕ ಮತ್ತು ಬುದ್ಧಿಗೆ ಮೀರಿದ ಆರಾಧನೆಯ ಪ್ರದರ್ಶನವು ಮತ್ತು ಆಶ್ಚರ್ಯ ಭಾವನೆಗಳಿಗೆ ಸೀಮಿತ ಮಾಡಲಿಲ್ಲ. ಅಂದರೆ, ಆತನು ಬಹಳ ದೃಢವಾಗಿ, ಹೊರತೋರುವ ರೀತಿಯಲ್ಲಿ ಪ್ರತಿಕ್ರಿಯೆ ಮಾಡಿದನು. ಅಂತೆಯೇ, ದೇವರಿಗೆ ತನ್ನಲ್ಲಿದ್ದದ್ದರ ಎಲ್ಲದರಲ್ಲಿ "ಹತ್ತರಲ್ಲೊಂದು ಭಾಗ"ವನ್ನು ಕೊಡಲು ತೀರ್ಮಾನಿಸಿದನು. ಇದು ದೇವರಿಂದ ಆಶೀರ್ವಾದ ಪಡೆಯಲಿಕ್ಕಾಗಿ ಅಲ್ಲ, ಆದರೆ ಈಗಾಗಲೇ ತಾನು ಪಡೆದ ದೇವರ ಬಹುಮಾನಕ್ಕೆ ಪ್ರತಿಸ್ಪಂದಿಸಿದನು. ಇಲ್ಲಿ ಸಹ ಜನಾಂಗವಾಗಿ ಇಸ್ರಾಯೇಲ್ಯರು ಬರುವ ಬಹುಪೂರ್ವದಲ್ಲೇ ದಶಾಂಶದ ವಿಷಯವನ್ನು ಇಲ್ಲಿ ನೋಡುವೆವು.

ಆದಿಕಾಂಡ 28:22ನ್ನು ಮತ್ತೊಮ್ಮೆ ಓದಿರಿ. "ದಶಾಂಶವು" "ನೀನು ನನಗೆ ಕೊಟ್ಟ ಎಲ್ಲದ್ದರಲ್ಲಿ" ತೆಗೆದಿಡಬೇಕಾದದ್ದು (ಆದಿ 28:22). ಯಾಕೋಬನು ದಶಾಂಶದ ಬಗ್ಗೆ ಹೇಳುವ ಮಾತಿನಿಂದ ಮತ್ತು ಅದು ಏನಾಗಿರಬೇಕು ಎಂಬುದರ ಬಗ್ಗೆ ಯಾವ ಪ್ರಮುಖ ವಿಚಾರವನ್ನು ನಾವು ಅರಿಯಬಹುದು?

ಮಂಗಳವಾರ ಮೇ 24

## ಮೋಸಗಾರನು ಮೋಸಗೊಂಡದ್ದು

ಆದಿಕಾಂಡ 29:1–30 ಹೇಗೆ ಮತ್ತು ಏಕೆ ದೇವರು ಲಾಬಾನನಿಂದಾದ ಮೋಸವನ್ನು ನಡೆಯಗೊಟ್ಟನು? ಯಾಕೋಬನು ಯಾವ ಪಾಠಗಳನ್ನು ಕಲಿತನು?

ಆತನು ತಲುಪಬೇಕಾದ ಸ್ಥಳಕ್ಕೆ ತಲುಪಿದಾಗ ಆತನು ಮೊದಲು ನೋಡಿದ ವಸ್ತು ಒಂದು ಬಂಡೆ; ಬಹುಶಃ ದೇವರ ಪ್ರಸನ್ನತೆಯ ಗುರುತಾಗಿದ್ದ ಆ ಬೆತೇಲಿನ ಬಂಡೆಯ ಕುರುಹಾಗಿತ್ತು (ಆದಿ 28:18,19). ಈ ಬಂಡೆಯ ಮೂಲಕ ಮುಂದಿದೆ ಆತನು ಹಾಹೇಲಳ ಜೊತೆ ಮಾತಾಡಲು ಅವಕಾಶವಾಯಿತು. ರಾಹೇಲಳು ಕುರಿಗಳನ್ನು ನೀರು ಕುಡಿಸಲು ಕರೆತರುತ್ತಿರುವಾಗ ಬಾವಿಯ ಮೇಲಿದ್ದ ಕಲ್ಲನ್ನು ತೆಗೆಯಲು ಇತರ ಕುರುಬರು ಒಪ್ಪದಿರುವಾಗ ಯಾಕೋಬನು ತಾನೊಬ್ಬನೇ ಅವಳಿಗಾಗಿ ಬಂಡೆಯನ್ನು ಉರುಳಿಸಿದಾಗ ರಾಹೇಲಳೊಂದಿಗೆ ಮಾತಾಡುವ ಅವಕಾಶ ಲಭಿಸುತ್ತದೆ (ಆದಿ 29:11).

ರಾಹೇಲಳು ತನ್ನ ಮನೆಯವರಿಗೆ ವಿಷಯ ಮುಟ್ಟಿಸುತ್ತಾ ಆತನಿಗೆ ಪ್ರತಿಕ್ರಿಯೆ ವ್ಯಕ್ತಮಾಡಿದನು. ಅವರ ಮೊದಲ ಭೇಟಿಯು ಫಲಕಾರಿಯಾಗಿತ್ತು. "ಯಾಕೋಬನು ರಾಹೇಲಳನ್ನು ಪ್ರೀತಿಸಿದನು (ಆದಿ 29:18). ಆಕೆಯನ್ನು ಹೆಂಡತಿಯಾಗಿ ಪಡೆಯಲು ಆತನು ಲಾಬಾನನಿಗೆ ದುಡಿದ ಏಳುವರುಷಗಳು "ಬಹಳ ಅಲ್ಪಕಾಲವೆಂಬಂತೆ" ಕಳೆದುಹೋಯಿತು (ಆದಿಕಾಂಡ 29:20).

ಆದಾಗ್ಯೂ, ಈ ಏಳು ವರುಷಗಳ ನಂತರ ಯಾಕೋಬನು ಮೋಸಹೋಗುವನು. ಆ ಮದುವೆಯ ರಾತ್ರಿಯಲ್ಲಿ, ತನ್ನ ಕೋಣೆಯಲ್ಲಿ ರಾಹೇಲಳಿಗೆ ಬದಲಾಗಿ, ಆಕೆಯ ಅಕ್ಕ ಲೇಯಳು ಇರುವುದನ್ನು ಕಾಣುವನು. ಆ ಮದುವೆಯ ದಿಬ್ಬಣದ ಆತುರ ಮತ್ತು ಯಾಕೋಬನಲ್ಲಿದ್ದ ತೀವ್ರ ತುಡಿತ ಹಾಗೂ ಅಸಹಾಯಕತೆಯನ್ನು ಲಾಬಾನನು ದುರುಪಯೋಗದಿಂದ ತನ್ನ ಕುತಂತ್ರ ಮಾಡುತ್ತಾನೆ. ಸ್ವಾರಸ್ಯಕರವಾಗಿ, ಯಾಕೋಬನು ಮೋಸ ಮಾಡಿದನು (ಆದಿಕಾಂಡ 29:25) ಎಂಬುದು ಅವನ ತಂದೆ ಇಸಾಕನು ಯಾಕೋಬನ ಗುಣವನ್ನು ವರ್ಣಿಸಲು ಬಳಸಿದ ಅದೇ ಪದದ ಪ್ರಕಾರ (ಆದಿ 27:35)– ಅಂದರೆ ಇಸಾಕ, ಏಸಾವರನ್ನು ಮೋಸ ಮಾಡಿದ ಪದಕ್ಕೆ ಸರಿಯಾದ ಮೂಲಪದವಾಗಿದೆ.

"ಹಲ್ಲಿಗೆ ಹಲ್ಲು, ಕಣ್ಣಿಗೆ ಕಣ್ಣು" ಎಂಬ ಪ್ರತೀಕಾರದ ನಿಯಮದ ಆಲೋಚನೆಯಂತೆ (ಆದಿ 21:24); ಆದಿ 9:6 ಹೋಲಿಸಿ). ತಪ್ಪಿತಸ್ಥನು ತಾನು ತಪ್ಪು ಮಾಡಿದವರಿಗೆ ಆದ ಅದೇ ಅಧ್ಯಾಯದ ಅರಿವು ತನಗೇ ಪ್ರಾಪ್ತವಾಯಿತೆಂದು ತಿಳುಕೊಳ್ಳುವುದಕ್ಕೆ ನಡೆಸುತ್ತದೆ. ಅದರಂತೆಯೇ, ಯಾಕೋಬನು ತಾನು ಬೇರೆಯವರಿಗೆ ಏನು ಮಾಡಿದನೋ, ಅದನ್ನೇ ತಾನು ಅನುಭವಿಸಿದ್ದಾನೆ.

ಮೋಸಹೋದವರು ಅನುಭವಿಸುವುದನ್ನು ಯಾಕೋಬನಿಗೆ ಈಗ ಅರ್ಥವಾಗುತ್ತದೆ. ದೇವರು ಲಾಬಾನನ ಮೋಸದ ಮೂಲಕ ಯಾಕೋಬನಿಗೆ ಆತನ ಸ್ವಂತ ಮೋಸದ ಪಾಠವನ್ನು ಹೇಳಿಕೊಟ್ಟನು. 'ಮೋಸಗಾರ'ನಾದ (ಆದಿ 27:12) ಯಾಕೋಬನಿಗೆ ಮೋಸವೆಂಬುದರ ಅರ್ಥ ತಿಳಿದಿತ್ತಾದರೂ ತಾನೇ ಮೋಸಕ್ಕೆ ಆಹುತಿಯಾದದ್ದಕ್ಕೆ ಆಶ್ಚರ್ಯಪಡುತ್ತಾನೆ. ಹಾಗಾಗಿ, "ನೀನು.... ನನಗೆ ಯಾಕೆ ಮೋಸ ಮಾಡಿದೆ?" (ಆದಿಕಾಂಡ 29:25) ಎಂದು ಆತನು ಪ್ರಶ್ನೆ ಮಾಡುತ್ತಾನೆ. ಇದರಿಂದ ಮೋಸ ಮಾಡುವುದು ತಪ್ಪೆಂದು ಅವನಿಗೆ ತಿಳಿದಿತ್ತು ಎಂದು ನಾವು ಅರಿಯುತ್ತೇವೆ.

ಯಾಕೋಬನು ಮೋಸಗಾರನಾದರೂ, ಆತನೇ ಮೋಸ ಹೋಗುತ್ತಾನೆ. "ನ್ಯಾಯವು" ಸಾಗದಿರುವಾಗ, ದುಷ್ಟತನ ಮಾಡುವವರು ತಪ್ಪಿಸಿಕೊಳ್ಳುವಾಗ ಅಥವಾ ಅಮಾಯಕರು ಸಂಕಟಪಡುವಾಗ ದೇವರಲ್ಲಿ ವಿಶ್ವಾಸವಿಡುವುದನ್ನು ನಾವು ಹೇಗೆ ಕಲಿಯಬಹುದು?

**ಬುಧವಾರ** **ಮೇ 25**

## ಕುಟುಂಬದ ಸೌಭಾಗ್ಯವು

ಯಾಕೋಬನಿಗೆ ತನ್ನ ಕೊನೆಯ ಏಳುವರುಷಗಳ ಪರದೇಶ ವಾಸವು ಬಹಳ ಪ್ರಯಾಸವಾಗಿದ್ದರೂ ಬಹಳ ಫಲಕಾರಿ ವರುಷಗಳಾಗಿದ್ದವು. ಅಷ್ಟರಲ್ಲಿ ಯಾಕೋಬನು ದೇವಜನರು 12 ಮೂಲಪಿತೃಗಳಲ್ಲಿ 11 ಮಂದಿಗೆ ಜನ್ಮದಾತನಾಗುತ್ತಾನೆ.

ಕಥೆಯ ಈ ಭಾಗವು ಯಾಕೋಬನ ಚರಿತ್ರೆಯ ಪ್ರಧಾನ ಕಾಲಘಟ್ಟವಾಗಿದೆ (ಆದಿಕಾಂಡ 25:19 ರಿಂದ 35:26) ಮತ್ತು ಅದರ ಪ್ರಾರಂಭ ಹಾಗು ಅಂತ್ಯದಲ್ಲಿ ದೇವರು "ಆಕೆಯ ಗರ್ಭವನ್ನು ತೆರೆದನು" ಎಂದು ಲೇಯಳ (ಆದಿ 29:31) ಮತ್ತು ರಾಹೇಳ (ಆದಿ 30:22) ವಿಷಯದಲ್ಲಿ ಹೇಳುವ ಬಹಳ ಪ್ರಮುಖ

ಉಕ್ತಿಯನ್ನು ಹೊಂದಿದೆ. ಹುಟ್ಟಿನ ಪ್ರತಿ ಸಂದರ್ಭದಲ್ಲಿಯೂ ಈ ಮಾತು ಇದೆ; ಅಂದರೆ ಇಲ್ಲಿ ಆದ ಪ್ರತಿಹುಟ್ಟು ದೇವರ ಅದ್ಭುತ ಕಾರ್ಯದ ಫಲವೇ ಆಗಿದೆ.

ಆದಿಕಾಂಡ 29:31 ರಿಂದ 30:22 ರವರೆಗೆ ಓದಿರಿ. ಇಲ್ಲಿ ನಡೆದ ವಿಷಯವನ್ನು ನಾವು ಇಂದು ಹೇಗೆ ಅರ್ಥಮಾಡಿಕೊಳ್ಳಬೇಕು?

ದೇವರು ಲೇಯಳ ಗರ್ಭವನ್ನು ತೆರೆದಾಗ ರೂಬೇನನು ಜನಿಸುತ್ತಾನೆ. ಆತನ ಹೆಸರಿನ ಮೂಲಪದ, Ra'ah (ರಾಹ); ಹಾಗೆಂದರೆ "ನೋಡು"ವನು. ಯಾಕೆಂದರೆ ಲೇಯಳು ಯಾಕೋಬನ ಪ್ರೀತಿಯನ್ನು ಹೊಂದದೇ ಇದ್ದದನ್ನು ದೇವರು "ನೋಡಿ" ತನಗಾದ ನೋವು ಹಾಗೂ ಯಾತನೆಗೆ ತಕ್ಕ ಪರಿಹಾರವಾಗಿ ಆ ಮಗು ಕೊಡಲಾಗಿತ್ತು.

ಮತ್ತೆ, ಸಿಮೆಯೋನ್ ಎಂಬ ಹೆಸರನ್ನು ಇನ್ನೊಬ್ಬನಿಗೆ ಕೊಟ್ಟಳು. ಆ ಪದದ ಮೂಲಧಾತು 'ಶಮ' (Shama) ಅಂದರೆ "ಕೇಳಿಸಿಕೊಳ್ಳುವುದು" ಅಂದರೆ ದೇವರು ತನಗಾದ ತೀವ್ರ ಅವಮಾನ ಹಾಗೂ ನೋವುಗಳನ್ನು "ಕೇಳಿಸಿಕೊಂಡು" ತನ್ನ ಮೇಲೆಯೂ ಸಹ ಹಾಗರಳಿಗೆ ದಯೆ ತೋರಿಸಿದಂತೆಯೇ ತೋರಿದ್ದಾನೆ ಎಂದು ಸಮಾಧಾನ ಪಟ್ಟಳು.

ಲೇಯಳ ಮಗ "ಸಿಮೆಯೋನ್" ಎಂಬುದು ಹಾಗರಳ ಮಗ ಇಷ್ಮಾಯೇಲಿನ ಹೆಸರಿನ ಮೂಲಪದ "ದೇವರು ಕೇಳುವವನು" ಎಂಬುದನ್ನು ಮೂರ್ಧನಿಸುತ್ತದೆ (ಆದಿ 16:11). ಲೇಯಳು ತನ್ನ ಕೊನೆಯ ಪುತ್ರನಿಗೆ ಜನ್ಮಕೊಟ್ಟಾಗ, "ಯೆಹೂದಾ" ಎಂದು ಹೆಸರಿಟ್ಟಳು. ಹಾಗೆಂದರೆ, "ಸ್ತೋತ್ರ" ಎಂಬರ್ಥ ಹೊಂದಿದೆ. ಲೇಯಳು ತನ್ನ ನೋವು ಅಥವಾ ದೊರಕಿದ ಆಶೀರ್ವಾದದ ಬಗ್ಗೆ ನೆನೆಸದೇ, ದೇವರನ್ನೇ ದೃಷ್ಟಿಸುತ್ತಾ ಆತನ ಕೃಪೆಗಾಗಿ ದೇವರನ್ನು ಕೊಂಡಾಡಿದಳು.

ವಿಪರ್ಯಾಸವೆಂಬಂತೆ, ಲೇಯಳು ಮುಂದೆ ಜನ್ಮ ಕೊಡಲಾರದವಳಾದಾಗ, ದೇವರು ರಾಹೇಲಳನ್ನು "ಜ್ಞಾಪಿಸಿಕೊಂಡು" ಆಕೆಯ ಗರ್ಭವನ್ನು ತೆರೆದನು (ಆದಿ 30:22). ಪ್ರೀತಿಪಾತ್ರಳಾದ ರಾಹೇಲಳು ತನ್ನ ಮದುವೆಯ ನಂತರ 7 ವರುಷಗಳು ಕಾಯಬೇಕಾಯಿತು. ಆಮೇಲೆ ಯಾಕೋಬನಿಗೆ ತನ್ನ ಮೊದಲ ಮಗನನ್ನು ಹೆತ್ತಳು (ಆದಿಕಾಂಡ 29:18,27 ಮತ್ತು 30:25). ಆ ಮಗುವಿಗೆ "ಯೋಸೇಫ" ಅಂದರೆ

ದೇವರು "ತನ್ನ ನಿಂದೆಯನ್ನು ತೆಗೆದುಹಾಕಿದನು" (ಆಸಫ್) ಮತ್ತು (ಯಾಸಫ್) "ಮತ್ತೊಂದು ಮಗನನ್ನು ಕೊಡುವನು" ಎಂಬುದನ್ನು ಸೂಚಿಸುತ್ತವೆ. ಈ ಸನ್ನಿವೇಶಗಳು ಎಷ್ಟೇ ವಕ್ರಗೊಂಡಿದ್ದರೂ, ಅದನ್ನೂ ಸಹ ದೇವರು ಅವುಗಳನ್ನು ಮನ್ನಿಸದಿದ್ದರೂ, ಅಬ್ರಹಾಮನ ಸಂತತಿ (ಬೀಜದ) ಮೂಲಕ ಒಂದು ಜನಾಂಗವನ್ನು ಉಂಟು ಮಾಡಲು ಅವುಗಳನ್ನು ಬಳಸಿಕೊಂಡನು.

ಈ ಘಟನೆಗಳ ಮೂಲಕ ದೇವರು ತನ್ನ ಉದ್ದೇಶಗಳನ್ನು ಪರಲೋಕದಲ್ಲಿ ಮತ್ತು ಭೂಲೋಕಗಳಲ್ಲಿ ಪೂರೈಸುವನು– ಅದೂ ಮಾನವರ ದೋಷ ಹಾಗು ಕೊರತೆಗಳ ನಡುವೆಯೇ– ಎಂದು ಹೇಗೆ ತೋರಿಸುತ್ತವೆ?

**ಗುರುವಾರ** **ಮೇ 26**

## ಯಾಕೋಬನು ಬಿಟ್ಟುಹೋದನು

ಈ ವೃತ್ತಾಂತದಲ್ಲಿ ಯಾಕೋಬನು– ತನ್ನ ತಂದೆ ಮತ್ತು ಸಹೋದರರನ್ನು ವಂಚಿಸಿ ಚೊಚ್ಚಲುತನವನ್ನು ಮತ್ತು ಇಸಾಕನು ತನ್ನ ಚೊಚ್ಚಲ ಮಗನಿಗಾಗಿ ಕೊಡಬೇಕೆಂದಿದ್ದ ಆಶೀರ್ವಾದವನ್ನು ಕದ್ದುಕೊಡುವನು– ಲಾಬಾನನ ಮೋಸಕ್ಕೆ ಪ್ರತಿಭಟಿಸದೆ ಆತನಿಗೆ ಪ್ರಾಮಾಣಿಕವಾಗಿ ಸೇವೆ ಮಾಡಿದನು. ತನ್ನ ಮಾವನು ತನಗೆ ಮೋಸ ಮಾಡಿದನೆಂದು ತಿಳಿದರೂ, ಅದನ್ನು ಹಾಗೆಯೇ ಬಿಟ್ಟುಬಿಟ್ಟನು. ಆತನ ಗುಣಸ್ವಭಾವವನ್ನು ಪರಿಗಣಿಸಿದರೆ, ಆತನು ಸಹಿಸಿಕೊಂಡು ತಟಸ್ಥನಾಗಿದ್ದದ್ದ ನಮಗೆ ಅರ್ಥವಾಗದು. ಯಾಕೋಬನು ಬಂಡೇಳಬಹುದಿತ್ತು. ಕನಿಷ್ಟ ಪ್ರತಿರೋಧ ತೋರಿಸಿ ಅಥವಾ ಚೌಕಾಶಿ ಮಾಡಬಹುದಿತ್ತು. ಆದರೆ ಹಾಗೇನು ಮಾಡಲಿಲ್ಲ. ಲಾಬಾನನು ಆಗ್ರಹಿಸಿದ್ದೆಲ್ಲವೂ ಎಷ್ಟೇ ಅನ್ಯಾಯವಾಗಿದ್ದರೂ, ಅದೆಲ್ಲವನ್ನೂ ಮಾಡಿದನು.

ಅದೇನೇ ಆದರೂ, ರಾಹೇಲಳಿಗೆ ಮೊದಲ ಮಗ ಯೋಸೇಫನು ಹುಟ್ಟುವ ವರುಷಕ್ಕೆ ಸರಿಯಾಗಿ ಲಾಬಾನನಿಗೆ ಯಾಕೋಬನು ಸೇವೆ ಮಾಡಿದ "ಹದಿನಾಲ್ಕನೇ ವರುಷದಲ್ಲಿ ಲಾಬಾನನನ್ನು ಬಿಟ್ಟು ವಾಗ್ದಾನದ ದೇಶಕ್ಕೆ ಹೋಗಲು ಯೋಚಿಸಿದನು (ಆದಿ 30:26). ಆದರೆ ಅವನು ತನ್ನ 'ಸ್ವಂತ ಮನೆಗೋಸ್ಕರ'ವೂ ಸಂಪಾದನೆ ಮಾಡಬೇಕೆಂದು ಚಿಂತಿಸಿದನು.

ಆದಿಕಾಂಡ 30:25–32ನ್ನು ಓದಿರಿ. ಇಲ್ಲಿ ಏನಾಗುತ್ತಿದೆ ಮತ್ತು ಯಾಕೋಬನು ಎಂತಹ ಆಲೋಚನೆ ಮಾಡಿದನು? ಅದಕ್ಕೆ ಲಾಬಾನನ ಪ್ರತಿಕ್ರಿಯೆ ಏನು?

ಯಾಕೋಬನಿಗೆ ತಾನು ತನ್ನ ಮನೆಯನ್ನು ಬಿಟ್ಟು ಬಹಳ ಕಾಲಗಳು ಸಂದುಹೋದವು. ಅಷ್ಟು ಕಾಲ ತನ್ನ ದೇಶಬಿಟ್ಟು ಉಳಿದುಕೊಳ್ಳಬೇಕೆಂದು ಬಹುಶಃ ನೆನಸಿರಲಿಲ್ಲ. ಆದರೆ ಅನೇಕ ಘಟನೆಗಳು ಆತನನ್ನು ದೂರವಿಟ್ಟಿದ್ದವು. ಈಗ ಮನೆಗೆ ಹಿಂತಿರುಗುವ ಕಾಲ ಮತ್ತು ಜೊತೆಗೆ ಎಂತಹ ಕುಟುಂಬದೊಡನೆ ಹಿಂತಿರುಗುತ್ತಿರುವನು!

ಇದೇ ಸಂದರ್ಭದಲ್ಲಿ, ಯಾಕೋಬನು ತನ್ನ ಸ್ವಭಾವಕ್ಕೆ ಅಪಚಾರವೆಂಬಂತೆ ಸಹಿಸಿಕೊಂಡದ್ದು ಆತನು ಬದಲಾಗಿರುವುದನ್ನು ತೋರಿಸುತ್ತದೆ; ನಂಬಿಕೆಯ ಪಾಠಗಳನ್ನು ಅರ್ಥಮಾಡಿಕೊಂಡಿದ್ದಾನೆ. ಹಾಗೆಂದರೆ, ಯಾಕೋಬನು ದೇವರ ಅಪ್ಪಣೆಗಾಗಿ ಕಾಯುತ್ತಾನೆ. ದೇವರು ತನಗೆ ಮಾತಾಡಿದ ಮೇಲೆಯೇ ಆತನು ಅಲ್ಲಿಂದ ಹೊರಡಲು ತೀರ್ಮಾನಿಸುವನು.

ದೇವರು ಯಾಕೋಬನಿಗೆ, "ಬೇತೇಲಿನ ದೇವರು" ಎಂದು ಕಾಣಿಸಿಕೊಂಡು, ಆತನು ಲಾಬಾನನ ಮನೆಯನ್ನು ಬಿಟ್ಟು "ತನ್ನ ಸ್ವಂತ ಮನೆಗೆ" (ಆದಿ 31:13) ಹಿಂತಿರುಗಲು ಅಪ್ಪಣೆ ಕೊಟ್ಟನು. ದೇವರ ಆ ನುಡಿಗಳು ಅಬ್ರಾಮನಿಗೆ "ನೀನು ನಿನ್ನ ಸ್ವಂತ ಮನೆಯನ್ನು" ಬಿಡಲು ಹೇಳಿದ ಅದೇ ಪದಗಳಾಗಿದ್ದವು (ಆದಿ 12:1).

ಇದೇ ಸಮಯದಲ್ಲಿಯೇ ಬಿಟ್ಟು ಹೋಗಬೇಕೆಂದು ಆತನು ತಿಳಿಯುವುದಕ್ಕೆ, ಲಾಬಾನ ಮತ್ತು ಆತನ ಮಕ್ಕಳು ಆತನೊಂದಿಗೆ ವರ್ತಿಸಿದ ರೀತಿ ಸಹಾಯ ಮಾಡಿತು (ಆದಿ 31:1,2). "ಯಾಕೋಬನು ಯುಕ್ತಿವಂತರಾದ ತನ್ನ ಬಂಧುಗಳನ್ನು ಬಿಟ್ಟು ಬಹಳ ಹಿಂದೆಯೇ ಹೊರಟುಹೋಗಲು ತನ್ನ ಅಣ್ಣನಾದ ಏಸಾವನನ್ನು ಎದುರಿಸಬೇಕೆಂಬ ಭಯವಿತ್ತು.

ಈಗ ಲಾಬಾನನ ಮಕ್ಕಳಿಂದ ತನಗೆ ಅಪಾಯವಿದೆ ಎಂದು ತಿಳುಕೊಂಡನು; ಏಕೆಂದರೆ ಅವರುಗಳು ತನ್ನ ಸಂಪತ್ತನ್ನು ನೋಡಿ ತಮ್ಮದೆಂದು ಭಾವಿಸಿ, ಅದನ್ನು

ಹಿಂಸೆಯಿಂದ ಪಡಕೊಳ್ಳುವುದಕ್ಕೆ ಪ್ರಯತ್ನಿಸಬಹುದಾಗಿತ್ತು" – ಎಲೆನ್ ಜಿ ವೈಟ್, ಪ್ಯಾಟ್ರಿಯಾರ್ಕ್ಸ್ ಮತ್ತು ಪ್ರಾಫೆಟ್ಸ್, ಪುಟ 193.

ಹಾಗಾಗಿ ಆತನು ತನ್ನ ಕುಟುಂಬ ಮತ್ತು ತನ್ನ ಆಸ್ತಿಯನ್ನೆಲ್ಲಾ ತೆಗೆದುಕೊಂಡು ಹೊರಟುಹೋದನು. ಹೀಗೆ ದೇವರ ಒಡಂಬಡಿಕೆಯ ಜನರ ಮಹಾಕಥನದ ಇನ್ನೊಂದು ಘಟ್ಟದ ಪ್ರಾರಂಭವಾಯಿತು.

**ಶುಕ್ರವಾರ** **ಮೇ 27**

**ಹೆಚ್ಚಿನ ಚಿಂತನೆಗೆ :** ದೇವರು ಯಾಕೋಬನನ್ನು ಆರಿಸಿಕೊಂಡದ್ದು, ಆತನು ಯೋಗ್ಯನಾಗಿದ್ದನು ಎಂದಲ್ಲ, ಬದಲಿಗೆ ತನ್ನ ಕೃಪೆಯ ನಿಮಿತ್ತವೇ. ಆದರೂ, ಯಾಕೋಬನು ಆ ಕೃಪೆಗೆ ತಾನು ತಕ್ಕವನು ಎಂದೆಣಿಸಲು ಬಹಳ ಶ್ರಮಪಟ್ಟನು. ಅದುವೇ ಬಹಳ ವ್ಯತಿರಿಕ್ತವಾಗಿತ್ತು. ಆತನು ಅದಕ್ಕೆ ತಕ್ಕವನೆಂದಾದರೆ, ಅದನ್ನು ಕೃಪೆಯೆಂದು ಹೇಳಲಿಕ್ಕಾಗದು; ಅದು ಕರ್ಮಾಧಾರಿತವಾಗಿದ್ದು (ರೋಮ 4:1–5) ಸುವಾರ್ತೆಗೆ ತದ್ವಿರುದ್ಧವಾಗಿದೆ. ಕೇವಲ ಅನಂತರದಲ್ಲಿ ದೇವರ ಕೃಪೆಯ ಮಹತ್ವವನ್ನು ಅರಿಯುವುದಕ್ಕೆ ಪ್ರಾರಂಭಿಸಿದನು; ದೇವರಲ್ಲಿ ಭರವಸವಿಡುವುದು, ನಂಬಿಕೆಯಿಂದ ಜೀವಿಸುವುದು ಮತ್ತು ದೇವರ ಮೇಲೆ ಸಂಪೂರ್ಣ ಅವಲಂಬಿತನಾಗುವುದನ್ನು ತಿಳಿಯಲಾರಂಭಿಸಿದನು. ಯಾಕೋಬನ ಅನುಭವದಲ್ಲಿ ಓರ್ವ ಮಹತ್ವಾಕಾಂಕ್ಷೆಯುಳ್ಳ ವ್ಯಕ್ತಿಗೆ ದೊಡ್ಡ ಪಾಠವಿದೆ: ಇನ್ನೊಬ್ಬರ ನಷ್ಟದಲ್ಲಿ ನಿನ್ನನ್ನು ವೃದ್ಧಿಮಾಡಿಕೊಳ್ಳುವುದಕ್ಕೆ ಪ್ರಯತ್ನಿಸಬೇಡ.

"ಯಾಕೋಬನು ಮೋಸದ ಮೂಲಕ ಚೊಚ್ಚಲುತನದ ಹಕ್ಕನ್ನು ಪಡೆಯ ಬಯಸಿದನು. ಆದರೆ ತಾನು ನಿರಾಶನಾದೆನೆಂದು ಕಂಡುಕೊಂಡನು. ಆತನು ಎಲ್ಲವನ್ನು ಕಳಕೊಂಡನೆಂದೂ, ದೇವರೊಂದಿಗಿನ ತನ್ನ ಸಂಬಂಧ, ತನ್ನ ಮನೆ, ಮತ್ತೆ ಎಲ್ಲವೂ ಕಳಕೊಂಡವನಾಗಿ ಹತಾಶನಾದ ಪರದೇಶಿಯಾಗಿದ್ದೇನೆಂದು ನೆನೆಸಿದನು. ಆದರೆ ದೇವರು ಏನು ಮಾಡಿದನು? ಆತನು ಅವನ ಗತಿಹೀನ ಪರಿಸ್ಥಿತಿ, ಅವನ ನಿರಾಶತನ, ಇವುಗಳನ್ನು ನೋಡಿ, ದೇವರಿಗೆ ಮಹಿಮೆ ತರುವ ವಸ್ತು ಇರುವುದೆಂದು ಕಂಡನು. ದೇವರು ಇದನ್ನು ತಿಳಿಕೊಂಡ ಕೂಡಲೇ ಆ ಆಶ್ಚರ್ಯಕರ ನಿಚ್ಚಣಿಗೆಯನ್ನು ತೋರಿಸಿದನು; ಅದು ಯೇಸುಕ್ರಿಸ್ತನನ್ನು ಸೂಚಿಸುತ್ತಿತ್ತು. ಹೀಗೆ, ದೇವರೊಂದಿಗೆ ಸಂಬಂಧವನ್ನು ಕಳಕೊಂಡ ಮನುಷ್ಯನು ಇಲ್ಲಿದ್ದಾನೆ,

ಮತ್ತು ದೇವರು ಅವನನ್ನು ನೋಡಿ, ಪಾಪದಿಂದ ಉಂಟಾದ ಈ ಕಂದರವನ್ನು ದಾಟಲು ಸೇತುವೆಯಾಗಿ ಕ್ರಿಸ್ತನು ಬೆಸೆಯಬೇಕೆಂದು ಒಪ್ಪಿದನು. ನಾವು ಸಹ ನೋಡಿಕೊಂಡು, ನಾನು ಸಹ ಪರಲೋಕವನ್ನು ಹಂಬಲಿಸುತ್ತಿರುವೆ, ಆದರೆ ನಾನು ಹೇಗೆ ಅದನ್ನು ಮುಟ್ಟಬಹುದು? ನನಗೆ ದಾರಿಕಾಣದು. ಅದನ್ನೇ ಯಾಕೋಬನು ಆಲೋಚಿಸಿದನು, ಹಾಗಾಗಿ ದೇವರು ಆ ನಿಚ್ಚಣಿಗೆಯು ಕನಸನ್ನು ಕೊಟ್ಟನು; ಅದು ಯೇಸುಕ್ರಿಸ್ತನೊಂದಿಗೆ, ಭೂಮಿಯನ್ನು ಪರಲೋಕದೊಂದಿಗೆ ಸೇರ ಮಾಡುವಂಥ ನಿಚ್ಚಣಿಗೆ. ಇದರ ಕೆಳತುದಿಯು ಭೂಮಿಯ ಮೇಲೆ ನಿಂತು, ಮೇಲುತುದಿಯು ಪರಲೋಕವನ್ನೇ ಮುಟ್ಟುವುದರಿಂದ, ಒಬ್ಬ ಮನುಷ್ಯನು ಅದನ್ನು ಹತ್ತಬಹುದು"– ಎಲೆನ್ ಜಿ ವೈಟ್, **ದಿ ಎಸ್‌ಡಿಎ ಬೈಬಲ್ ಕಮೆಂಟರಿ,** ಸಂಪುಟ 1, ಪುಟ 1095.

## ಚರ್ಚಿಸಬೇಕಾದ ಪ್ರಶ್ನೆಗಳು

1. ಈ ಜನರ (ಇಸಾಕ, ರೆಬೆಕ್ಕಳು, ಯಾಕೋಬ ಏಸಾವ, ಲಾಬಾನ, ರಾಜೇಲಳು ಲೇಯ) ಗುಣಗಳನ್ನು ಈ ಪವಿತ್ರ ಚರಿತ್ರೆಯ ಈ ಕೆಲವು ವೃತ್ತಾಂತಗಳಲ್ಲಿ ನೋಡಿರಿ. ಇಲ್ಲಿ ತುಂಬಿರುವ ಸುಳ್ಳು ಹಾಗು ಮೋಸವನ್ನು ಗಮನಿಸಿ. ಇದು ನಮಗೆ ಸಾಮಾನ್ಯ ಮಾನವ ಸ್ವಭಾವ ಮತ್ತು ದೇವರ ಕೃಪೆಯ ಬಗ್ಗೆ ಏನು ಬೋಧಿಸುತ್ತವೆ?

2. ಯಾಕೋಬನ ಚರಿತ್ರೆಯನ್ನು ನೀವು ಓದುವಾಗ, ಕಾಲಾಂತರದಲ್ಲಿ ಅವನ ಸ್ವಭಾವವು ಹಸನಾಗುತ್ತಲೂ ವೃದ್ಧಿಯಾಗುತ್ತಲೂ ಇದ್ದದ್ದಕ್ಕೆ ಯಾವ ಆಧಾರವನ್ನು ಕಾಣುವಿರಿ?